ದಿನಾಂಕ 16.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ- 9 ರಿಂದ 11 ನೇ ಎದುರುದಾರರ ಪರ ವಕೀಲರಿಂದಃ-</u>**

ನಾನು ಮತ್ತು ನನ್ನ ತಂದೆ ತಾಯಿ ಒಟ್ಟಿಗೆ ವಾಸವಾಗಿದ್ದೆನು. ನನ್ನ ತಂದೆ ತಾಯಿ ಮೃತರಾಗಿದ್ದು ಅವರು ವಾಸವಾಗಿದ್ದ ಮನೆಯಲ್ಲಿ ಈಗ ನಾನು ವಾಸವಾಗಿದ್ದೇನೆ. ನನ್ನ ತಂದೆ ಆರು ತಿಂಗಳ ಹಿಂದೆ ಮೃತರಾಗಿರುತ್ತಾರೆ. 1999 ನೇ ಇಸವಿಯಲ್ಲಿ ನನ್ನ ವಿರುದ್ಧ ಕೊಲೆ ಆಪಾಧನೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ದಿನಾಂಕ 18.11.1999 ರಂದು ನಾನು ಸದರಿ ಪ್ರಕರಣದಲ್ಲಿ ಜಾಮೀನಿನ ಮೇಲೆ ಜೈಲಿನಿಂದ ಹೊರಗಡೆ ಬಂದಿದ್ದೆನು ಎಂದರೆ ನನಗೆಗೊತ್ತಿಲ್ಲ. ದಿನಾಂಕ 30.08.2003 ರಂದು ನ್ಯಾಯಾಲಯ ನನ್ನನ್ನು ಆರೋಪಗಳಿಂದ ಖುಲಾಸೆ ಮಾಡಿರುತ್ತದೆ ಎಂದರೆ ಸರಿ. ಕ್ರಿಮಿನಲ್ ಪ್ರಕರಣದಲ್ಲಿ ನನ್ನ ತಂದೆ ನನಗೆ ಜಮೀನು ನೀಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು ನೀಡಿದ ಜಾಮೀನಿನ ಮೇಲೆ ನಾನು ಜೈಲಿನಿಂದ ಬಿಡುಗಡೆ ಹೊಂದಿರುತ್ತೇನೆ ಎಂದರೆ ಸರಯಲ್ಲ. ನಾನು ಜಾಮೀನು ಪಡೆದ ನಂತರ ಪ್ರಕರಣ ಮುಕ್ತಾಯ ವಾಗುವವರೆಗೂ ಪ್ರತಿ ದಿನಾಂಕದಂದು ಎಸ್.ಸಿ ನಂಬರ 46/1999 ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆಗಾಗ್ಗೆ ಹೋಗುತ್ತಿದ್ದೆನು ಎಂದು ಉತ್ತರಿಸಿರುತ್ತಾರೆ. ಸದರಿ ಕೇಸನ್ನು ವಕೀಲರಾದ ಎಂ.ಕೆ ಪೂವಯ್ಯರವರು ನಡೆಸಿರುತ್ತಾರೆ.

ಅಸಲು ದಾವಾ ಸಂಖ್ಯೆ 66/1999 ನಲ್ಲಿ ವಾದಿಯಾದ ನನ್ನ ಅಣ್ಣನಿಗೆ ಎಂ.ಕೆ ಪೂವಯ್ಯರವರು ವಕೀಲರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನನ್ನ ತಂದೆಯ ಪಾಟೀ ಸವಾಲಿನ ದೃಢೀಕೃತ ನಕಲನ್ನು ದಿನಾಂಕ 26.07.2006 ರಂದು ಅರ್ಜಿ ಹಾಕಿ ಪಡೆದುಕೊಂಡಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ತಂದೆ ಸೇರಿ ದಿನಾಂಕ 09.01.2004 ರಂದು 9 ನೇ ಎದುರುದಾರರಿಗೆ ಮಾರಾಟ ಮಾಡಲು ಒಪ್ಪಿ ಬರೆದುಕೊಟ್ಟ ಕ್ರಯದ ಕರಾರುಪತ್ರಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕ 27.01.2009 ರಂದು 9 ನೇ ಎದುರುದಾರರು ರೂ.1,75,000/- ಮತ್ತು ರೂ.25,000/- ಮೊತ್ತದ ಎರಡು ಚೆಕ್ಕುಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಒಟ್ಟಿಗೆ ವಾಸವಾಗಿದ್ದು, ಅಸಲು ದಾವಾ ಸಂಖ್ಯೆ 66/1999 ರ ಬಗ್ಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಹಿಂದೆ ಚಿಕ್ಕಮಗಳೂರಿನಲ್ಲಿ ವಾಸವಾಗಿರಲಿಲ್ಲ ಹಾಗೂ 1999 ರಿಂದ 2003 ರವರೆಗೆ ಕ್ರಿಮಿನಲ್ಲಿ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆನು ಎಂದರೆ ಸರಿಯಲ್ಲ. ಕ್ರಿಮಿನಲ್ ಪ್ರಕರಣದಲ್ಲಿ ನನ್ನ ಪರವಾಗಿ ಇದ್ದ ವಕೀಲರು ಸಿವಿಲ್ ದಾವೆಯನ್ನು ನನ್ನ ಅಣ್ಣನ ಪರವಾಗಿ ದಾಖಲಿಸಿದ್ದು, ಅವರು ಸಿವಿಲ್ ದಾವೆಯ ವಿಚಾರವನ್ನು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. 2006 ನೇ ಇಸವಿಯಲ್ಲಿಯೇ ನಾನು ಒಎಸ್ 66/1999 ರಲ್ಲಿನ ನನ್ನ ತಂದೆಯ ಸಾಕ್ಷ್ಯ ವಿಚಾರಣೆಯ ದೃಡೀಕೃತ ನಕಲನ್ನು ಪಡೆದಿದ್ದು, ದಾವೆಯ ಬಗ್ಗೆ ನನಗೆ ಆಗಲೇ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಅಸಲು ದಾವೆ ಬಗ್ಗೆ ನನಗೆ ಮೊದಲೇ ಮಾಹಿತಿ ಇದ್ದರೂ ಸಹಾ ನಾನು ಮಾಹಿತಿ

ಇಲ್ಲವೆಂದು ಹೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 26.02.2010 ರಲ್ಲಿಯೇ ಅಸಲು ದಾವಾ ಸಂಖ್ಯೆ 66/1999 ರ ತೀರ್ಪು ಆಗಿರುವುದರಿಂದ ಅದನ್ನು ಪ್ರಶ್ನಿಸಲು ನನಗೆ ಈಗ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.